# ಬಾಲ ಸ್ವಚ್ಛತೆ ಕಾರ್ಯಕ್ರಮ

## ಪರಿಚಯ

- ಸ್ವಚ್ಛ ಭಾರತ ಆಂಧೋಲನಕ್ಕೆ ಬೆಂಬಲ ನೀಡುವುದಕ್ಕಾಗಿ 14ನೇ ನವೆಂಬರ್ 2014 ರಲ್ಲಿ ಬಾಲ ಸ್ವಚ್ಛತಾ ಆಂದೋಲನವನ್ನು ಪ್ರಾರಂಭಿಸಲಾಯಿತು.
- ಸಮಗ್ರ ಶಿಶು ಅಭಿವೃದ್ಧಿ ಸೇವೆಗಳಲ್ಲಿ ಅಂಗನವಾಡಿಯು ಕೇಂದ್ರ ಬಿಂದುವಾಗಿರುವ ಕಾರಣ ಇದರ ಸುತ್ತಮುತ್ತ ಸ್ವಚ್ಛತೆಯನ್ನು ಕಾಪಾಡುವುದು ಅತ್ಯಂತ ಪ್ರಾಮುಖ್ಯವಾಗಿದೆ. ಏಕೆಂದರೆ, ಇಲ್ಲಿ 6 ವರ್ಷಕ್ಕಿಂತ ಕೆಳಗಿನ ಪ್ರಾಯದ ಮಕ್ಕಳಿಗೆ, ಗರ್ಭಿಣಿಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಆರೋಗ್ಯ ಮತ್ತು ಪೌಷ್ಠಿಕಾಂಶ ಸೇವೆಗಳನ್ನು ಒದಗಿಸಲಾಗುತ್ತದೆ. ಈ ಗುಂಪಿನವರಿಗೆ ಸೋಂಕು ತಗಲುವ ಸಾಧ್ಯತೆ ಹೆಚ್ಚು. ಆದ್ದರಿಂದ, ಈ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಈ ಕೆಳಗಿನ ಕ್ರಮಗಳನ್ನು ಪಾಲಿಸುವುದು ಅತ್ಯಂತ ಅಗತ್ಯವಾಗಿದೆ:




**1. ಅಂಗನವಾಡಿಗಳು ಸ್ವಚ್ಛವಾಗಿರಬೇಕು**

- ಅಂಗನವಾಡಿ ಕೇಂದ್ರ ಕಟ್ಟಡ, ನೆಲ ಸಿಮೆಂಟಿನದ್ದಾಗಿರಬೇಕು, ಹಂಚು ಅಥವಾ ಕಲ್ಲಿನ ಕಟ್ಟಡ ಆಗಿರಬೇಕು.
- ಅಂಗನವಾಡಿ ಕೇಂದ್ರದಲ್ಲಿ ಸಾಕಷ್ಟು ಬೆಳಕಿರಬೇಕು, ಸಾಕಷ್ಟು ಗಾಳಿ-ಬೆಳಕು ಬರುವಂತಿರಬೇಕು.
- ಬಿರುಕುಗಳು, ಗಡುಸಾಗಿರುವ ಮೈಲ್ಮೈ, ಬಿಟ್ಟು ಹೋಗಿರುವ ಸಂಧಿಗಳನ್ನು ಆದಷ್ಟು ಬೇಗನೆ ರಿಪೇರಿ ಮಾಡಬೇಕು ಮತ್ತು ಆಗಾಗ ತನಿಖೆ ಮಾಡುತ್ತಿರಬೇಕು.
- ಗೋಡೆಗಳು ಮತ್ತು ಮೇಲ್ಛಾವಣಿಯಿಂದ ಆಗಾಗ ಕಸಗಳು ಮತ್ತು ಜೇಡರ ಬಲೆಗಳನ್ನು ತೆಗೆಯುತ್ತಿರಬೇಕು.
- ನೆಲಗಳು, ಚಾಪೆಗಳನ್ನು ಮತ್ತು ಶೀಟ್‌ಗಳನ್ನು ಪ್ರತಿದಿನವೂ ತೊಳೆಯುತ್ತಿರಬೇಕು.
- ಕೀಟಗಳು ಪ್ರವೇಶಿಸಬಹುದಾದ/ನುಸುಳಬಹುದಾದ ಒಳ ಚರಂಡಿಗಳು ಮತ್ತು ಇತರ ರಂಧ್ರಗಳನ್ನು ಮುಚ್ಚಬೇಕು.

**2. ಸುತ್ತಮುತ್ತಲೂ ಸ್ವಚ್ಛವಾಗಿರಬೇಕು**

- ಅಂಗನವಾಡಿ ಕೇಂದ್ರದಲ್ಲಿ ಮುಚ್ಚಿದ ಕಸದ ತೊಟ್ಟಿಯಲ್ಲಿ ಕಸಗಳನ್ನು ಸಂಗ್ರಹಿಸಬೇಕು ಮತ್ತು ಅವುಗಳನ್ನು ಒಂದು ಗೊಬ್ಬರದ ಗುಂಡಿಯಲ್ಲಿ ಸುರಕ್ಷಿತವಾಗಿ ಎಸೆಯಬೇಕು.
- ತ್ಯಾಜ್ಯಗಳು/ಕಸಗಳನ್ನು ವಿಲೇವಾರಿ ಮಾಡುವುದು ಕಡ್ಡಾಯವಾಗಿರಬೇಕು ಹಾಗೂ ಕಸದ ತೊಟ್ಟಿಗಳನ್ನು ಪ್ರತಿದಿನ ಖಾಲಿ ಮಾಡಬೇಕು ಮತ್ತು ಪುನಃ ಉಪಯೋಗಿಸುವುದಕ್ಕೆ ಮುಂಚೆ ಅದನ್ನು ರೋಗಾಣುಮುಕ್ತಗೊಳಿಸಬೇಕು.
- ಸೊಳ್ಳೆಗಳು ಉತ್ಪತ್ತಿಯಾಗದಂತೆ ಎಚ್ಚರಿಕೆ ವಹಿಸಲು ಅಂಗನವಾಡಿ ಕೇಂದ್ರ, ಶೌಚಾಲಯ ಮತ್ತು ನಲ್ಲಿಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು.
- ಅಡುಗೆ ಮನೆಯಿಂದ ಹೊರಗೆ ಬರುವ ತ್ಯಾಜ್ಯ ನೀರನ್ನು ನೆನೆಗುಂಡಿ ಮಾಡಿ ಹಾಯಿಸಬೇಕು ಅಥವಾ ಪಕ್ಕದ ಹಿತ್ತಲ ತೋಟಕ್ಕೆ ಸಾಗುವಂತೆ ಮಾಡಬೇಕು.

**3. ಕಾರ್ಯಕರ್ತೆ/ಸಹಾಯಕಿಯರು ಸ್ವಚ್ಛವಾಗಿರಬೇಕು**

- ತಲೆಕೂದಲನ್ನು ಪ್ರತಿದಿನ ತೊಳೆಯಬೇಕು. ಪ್ರತಿದಿನ ತಲೆ ಬಾಚಬೇಕು ಮತ್ತು ಹೇನು ಇದೆಯೇ ಎಂದು ಪ್ರತಿದಿನವೂ ಪರೀಕ್ಷೆ ಮಾಡಬೇಕು.
- ಪ್ರತಿದಿನ ಬೆಳಿಗ್ಗೆ ಮತ್ತು ರಾತ್ರಿ ಮಲಗುವುದಕ್ಕೆ ಮುಂಚೆ ಹಲ್ಲು ಉಜ್ಜಬೇಕು.
- ಪ್ರತಿದಿನ ಸ್ನಾನ ಮಾಡಬೇಕು ಮತ್ತು ಪ್ರತಿದಿನ ಬಟ್ಟೆ ತೊಳೆಯಬೇಕು ಮತ್ತು ಬಟ್ಟೆ ಬದಲಾಯಿಸಬೇಕು.
- ಮಲವಿಸರ್ಜನೆ ಬಳಿಕ, ಆಹಾರ ಸೇವನೆಗೆ ಮುಂಚೆ, ತೆರೆದ ಗಾಯಕ್ಕೆ ಚಿಕಿತ್ಸೆ ನೀಡುವುದಕ್ಕೆ ಮುಂಚೆ, ತ್ಯಾಜ್ಯ ಕಸಗಳನ್ನು ನಿರ್ವಹಿಸಿದ ಬಳಿಕ ಇತ್ಯಾದಿ ಸಂದರ್ಭಗಳಲ್ಲಿ ಕೈಗಳನ್ನು ಸಾಬೂನಿನಿಂದ ತೊಳೆಯಬೇಕು.
- ಕೈ ಮತ್ತು ಮುಷ್ಠಿಯ ಎಲ್ಲಾ ಭಾಗಗಳನ್ನು ಚೆನ್ನಾಗಿ ತೊಳೆಯುತ್ತಾ ಪ್ರತಿ ಬಾರಿ ಕೈಗಳನ್ನು ಚೆನ್ನಾಗಿ ತೊಳೆಯಬೇಕು.
- ಸೋಂಕು ತಗುಲುವುದನ್ನು ತಪ್ಪಿಸುವುದಕ್ಕಾಗಿ ಮಣ್ಣಿನ ನೆಲದಲ್ಲಿ ಚಪ್ಪಲಿ ಧರಿಸಬೇಕು.
- ಅಂಗನವಾಡಿ ಕೇಂದ್ರದಲ್ಲಿರುವ ಕೈ ತೊಳೆಯುವ ಸೌಲಭ್ಯ ಮಕ್ಕಳಿಗೆ ಎಟಕುವಂತಿರಬೇಕು ಮತ್ತು ಇದನ್ನು ಆಗಾಗ ಸ್ವಚ್ಛ ಮಾಡುತ್ತಿರಬೇಕು.

**5. ಸ್ವಚ್ಛ ಕುಡಿಯುವ ನೀರು**

- ಆಹಾರ ಪದಾರ್ಥಗಳನ್ನು ತೊಳೆಯುವುದಕ್ಕಾಗಿ ಉಪಯೋಗಿಸಲಾಗುವ ನೀರು ಸ್ವಚ್ಛವಾಗಿರಬೇಕು.
- ನೀರು ದಾಸ್ತಾನು ಇರಿಸುವ ಟಾಂಕಿಗಳು/ಬಕೆಟ್‌ಗಳನ್ನು ನಿರಂತರವಾಗಿ ಸ್ವಚ್ಛ ಮಾಡುತ್ತಿರಬೇಕು.
- ಸುರಕ್ಷಿತ ಕುಡಿಯುವ ನೀರು ಲಭ್ಯವಿರಬೇಕು ಮತ್ತು ಅದನ್ನು ಡಬ್ಬ/ಪಾತ್ರೆಗಳಲ್ಲಿ ಸಂಗ್ರಹಿಸಬೇಕು ಮತ್ತು ಇವುಗಳಿಂದ ನೀರು ತೆಗೆಯಲು ನಲ್ಲಿ ಜೋಡಿಸಿರಬೇಕು.
- ಪಾತ್ರೆಗಳಿಂದ ನೀರು ತೆಗೆಯುವಾಗ ಅದಕ್ಕೆ ಕೈ ಮುಳುಗಿಸಬಾರದು.
- ಒಂದು ವೇಳೆ ಫಿಲ್ಟರ್‌ಗಳು/ಪ್ಯೂರೀಫೈಯರ್‌ಗಳನ್ನು ಉಪಯೋಗಿಸುತ್ತಿದ್ದಲ್ಲಿ, ಅವುಗಳನ್ನು ತೊಳೆಯುವುದಕ್ಕಾಗಿ ನೀಡಲಾಗಿರುವ ನಿರ್ದೇಶನಗಳನ್ನು ಪಾಲಿಸಬೇಕು.
- ಸುರಕ್ಷಿತವಾಗಿ ಕುದಿಸಬೇಕು. ಕುಡಿಯುವುದಕ್ಕೆ ಅಥವಾ ಅಡುಗೆಗಾಗಿ ನೀರನ್ನು ಉಪಯೋಗಿಸುವುದಕ್ಕೆ ಮುಂಚೆ ಸರಳವಾದ ನೀರು ಶುದ್ಧೀಕರಣ ವಿಧಾನ ಉಪಯೋಗಿಸಬೇಕು.

**4. ಸ್ವಚ್ಛ ಆಹಾರ**

- ಆಹಾರ ತಯಾರಿಸಲು ಮತ್ತು ಬಡಿಸುವುದಕ್ಕಾಗಿ ಉಪಯೋಗಿಸಲಾಗುವ ಎಲ್ಲಾ ಪಾತ್ರೆಗಳನ್ನು ಸಾಬೂನಿನಿಂದ ತೊಳೆಯಬೇಕು.
- ಗೋಧಿ ಮತ್ತು ಅಕ್ಕಿ ಮೊದಲಾದ ಧವಸ ಧಾನ್ಯಗಳನ್ನು ಗಾಳಿ ಸೇರದ ಗೋಣಿಯಲ್ಲಿ ಅಥವಾ ಡಬ್ಬಿಗಳಲ್ಲಿ ದಾಸ್ತಾನು ಇರಿಸಬೇಕು.
- ಮನೆ ಆಹಾರ ಗಳನ್ನು ಸ್ವಚ್ಛವಾದ ಸ್ಥಳದಲ್ಲಿ ದಾಸ್ತಾನು ಇರಿಸಬೇಕು ಮತ್ತು ಅವುಗಳಿಗೆ ತೇವಾಂಶ ಸೇರದಂತೆ ಪ್ಲಾಸ್ಟಿಕ್‌ನಿಂದ ಮುಚ್ಚಬೇಕು.
- ಆಹಾರ ಪದಾರ್ಥಗಳನ್ನು ಗೋಡೆಯಿಂದ ದೂರದಲ್ಲಿ ದಾಸ್ತಾನು ಇರಿಸುವುದಕ್ಕಾಗಿ ಮರದ ಹಲಗೆಯನ್ನು ಉಪಯೋಗಿಸಬಹುದಾಗಿದೆ.
- ಹೊಸ ದಾಸ್ತಾನುಗಳನ್ನು ಉಪಯೋಗಿಸುವುದಕ್ಕೆ ಮುಂಚೆ ಹಳೆಯದ್ದನ್ನು ಖಾಲಿ ಮಾಡಬೇಕು.
- ಆಹಾರ, ಎಣ್ಣೆ ಮತ್ತು ನೀರನ್ನು ದಾಸ್ತಾನು ಇರಿಸುವುದಕ್ಕಾಗಿ ರಾಸಾಯನಿಕ ಡಬ್ಬಿಗಳನ್ನು ಉಪಯೋಗಿಸಬಾರದು.
- ಉದ್ದದ ಚಮಚಗಳಿಂದ ಆಹಾರಗಳನ್ನು ಬಡಿಸಬೇಕು.
- ಆಹಾರ ತಯಾರಿಸುವುದಕ್ಕಾಗಿ ಉಪಯೋಗಿಸಲಾಗುವ ಪದಾರ್ಥಗಳು ಕಲಬೆರಕೆಯಾಗಿರಬಾರದು ಮತ್ತು ಕೀಟ–ಸೋಂಕುಗಳಿಂದ ಮುಕ್ತವಾಗಿರಬೇಕು.
- ಅಡುಗೆಮನೆ ಪ್ರದೇಶದಲ್ಲಿ ರಾಸಾಯನಿಕಗಳು/ವಿಷ ಪದಾರ್ಥಗಳು/ಕೀಟ ನಾಶಕಗಳನ್ನು ಇಡಬಾರದು.

**6. ಶೌಚಾಲಯಗಳನ್ನು ಸ್ವಚ್ಛ ಮಾಡಬೇಕು**

- ಪ್ರತಿದಿನ ಬೆಳಿಗ್ಗೆ ಮತ್ತು ಮಕ್ಕಳು ಹೋದ ಮೇಲೆ ಶೌಚಾಲಯಗಳನ್ನು ತೊಳೆಯಬೇಕು. ಪ್ರತಿ ಬಾರಿ ಉಪಯೋಗಿಸಿದ ಮೇಲೆ ತೊಳೆಯಬೇಕು.
- ಶೌಚಾಲಯದ ಸಮೀಪ ಅನುಕೂಲಕರ ಸ್ಥಳದಲ್ಲಿ ನೀರು ಮತ್ತು ಸಾಬೂನು ಇರಿಸಿರಬೇಕು.
- ಶೌಚಾಲಯಕ್ಕಾಗಿ ನಿರಂತರವಾಗಿ ಸಾಕಷ್ಟು ನೀರು ಸರಬರಾಜು ಸಿಗುತ್ತಿರಬೇಕು.
- ನಲ್ಲಿಗಳು ಸೋರುತ್ತಿವೆಯೇ ಎಂದು ಪರೀಕ್ಷೆ ಮಾಡಬೇಕು.
- ಮಕ್ಕಳಿಗೆ ಉಪಯೋಗಿಸಲು ಅನುಕೂಲಕರವಾದ ಶೌಚಾಲಯಗಳನ್ನು ನಿರ್ಮಿಸಬೇಕು.
- ಮಕ್ಕಳಿಗೆ ಅನುಕೂಲಕರವಾದ ಶೌಚಾಲಯಗಳಲ್ಲಿ ಈ ಕೆಳಗಿನ ಅಂಶಗಳು ಪ್ರಾಮುಖ್ಯವಾಗಿವೆ:
  - ಮಕ್ಕಳಿಗಾಗಿ ಖಾಸಗಿತನ, ಗೋಡೆಗಳಲ್ಲಿ ಸುಂದರವಾದ ಪಕ್ಷಿಗಳು ಮತ್ತು ಪ್ರಾಣಿಗಳ ಚಿತ್ರ, ಬಾಲಕರು ಮತ್ತು ಬಾಲಕಿಯರಿಗಾಗಿ ಪ್ರತ್ಯೇಕವಾದ ಶೌಚಾಲಯಗಳು, ಶೌಚಾಲಯದೊಳಗೆ ತೊಳೆಯುವ ಮತ್ತು ಸ್ವಚ್ಛ ಮಾಡುವ ವ್ಯವಸ್ಥೆ ಇತ್ಯಾದಿಗಳಿರಬೇಕು.